ಮೂಲ ದಾವಾ ಸಂಖ್ಯೆ. 82/2015 ಡಿ ಡಬ್ಲ್ಯೂ 1

(ದಿನಾಂಕ 09-04-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣಿಕರಿಸಲಾಯಿತು.)

ಪಾಟೀ ಸವಾಲುಃ ವಾದಿ ಪರ ಶ್ರೀ ಎಸ. ಎಮ್. ಎಸ್. ವಕೀಲರಿಂದಃ-

ನನ್ನ ತಂದೆ ಹೆಸರು ಬೈಲಪ್ಪ ತಾಯಿ ಹೆಸರು ಬೈಲಮ್ಮ, ನನ್ನ ತಂದೆಯ ತಂದೆಯ ಹೆಸರು ಕೊರಪ್ಪ. ನನ್ನ ಅಜ್ಜಿಯ ಹೆಸರು ಸಕ್ರಮ್ಮ, ಕೊರಪ್ಪ ಮತ್ತು ಸಕ್ರಮ್ಮ ಇವರ ತಂದೆಯ ಹೆಸರು ನನಗೆ ಗೊತ್ತಿಲ್ಲ. ಮೂಲತಃ ದಾವಾ ಆಸ್ತಿಯು ನಮ್ಮ ಅಜ್ಜಿ ಸಕ್ರಮ್ಮ ಇವರಿಗೆ ಸೇರಿರುತ್ತದೆ. ದಾವಾ ಆಸ್ತಿಯು ಸಕ್ರಮ್ಮ ಇವರಿಗೆ ಸೇರಿತ್ತು ಅನ್ನುವ ಬಗ್ಗೆ ನಾನು ನ್ಯಾಯಾಲಯಕ್ಕೆ ಪಹಣಿ ಮತ್ತು ಡೈಗ್ಲಾಟನ್ನು ಹಾಜರಿ ಪಡಿಸಿರುತ್ತೇನೆ. ಹಗ್ಗಡಾಳ ಕುರುಬರ ಸಕ್ರವ್ವ ಇವರು ನಮ್ಮ ತಂದೆಯ ತಾಯಿ. ಸದರಿಯವರು ಸರ್ವೆ ನಂ,140 ಸಿ/2 ಗೆ ಸಂಬಂದಿಸಿದವರು ಇರುತ್ತಾರೆ, ದಾವಾ ಅಸ್ತಿಗೆ ಸಂಬಂಧಿಸಿದ್ದು ಇರುವುದಿಲ್ಲ ಎಂದರೆ ಸರಿಯಲ್ಲ. ನಾನು 3 ನೇ ತರಗತಿಯವರೆಗೆ ವ್ಯಾಸಾಂಗ ಮಾಡಿರುತ್ತೇನೆ. ಸರ್ವೆ ನಂ. 140 ಒಟ್ಟು ಎಷ್ಟು ಎಕರೆ ಇದೆ ಎಂದರೆ ಸಾಕ್ಷಿ ನಮ್ಮ ಅಮ್ಮ ಸಕ್ರವ್ವ ಹೆಸರಿನಲ್ಲಿ 6-00 ಎಕರೆ ಇದೆ ಎನ್ನುತ್ತಾರೆ. ಸದರಿ 6 ಎಕರೆ ಜಮೀನು 140 ಸಿ/2 ನ 140 ಸಿ/1 ರಲ್ಲಿ ಇದೆಯಾ ಎಂದರೆ ಸಾಕ್ಷಿಯು ನಾನು ಒದಿಲ್ಲ ಮತ್ತು ನಾನು ನೋಡಿಲ್ಲ ಅನ್ನುತ್ತಾರೆ. ಸರ್ವೆ ನಂ,140 ಸಿ/1 ದಾವಾ ಆಸ್ತಿ ಇದು ಒಟ್ಟು 7 ಎಕರೆ 47 ಸೆಂಟ್ಸ ಇದೆ ಎಂದರೆ ಸರಿ. ಸರ್ವೆ ನಂ,140 ಸಿ/2 ಒಟ್ಟಾರೆ 14 ಎಕರೆ 51 ಸೆಂಟ್ಸ ಇದೆ ಎಂದರೆ ಸರಿ. ಸರ್ವೆ ನಂ,140 ಸಿ5 ಸಿ 6 ಎಕರೆ 66 ಸೆಂಟ್ಸ ಇದೆ ಎಂದರೆ ಸರಿ. ಸದರಿ 6 ಎಕರೆ 66 ಸೆಂಟ್ಸ ಇದು ನಮ್ಮ ಅಜ್ಜಿ ಹೆಗಡಾಳ ಕುರುಬರ ಸಕ್ರವ್ವ ಇವರದ್ದು ಎಂದರೆ ಸರಿ. ಸದರಿ 6 ಎಕರೆ 66 ಸೆಂಟ್ಸ ಜಮೀನಿಗೆ ನಾವು ಸಂಬಂಧ ಎಂದರೆ ಸರಿ. ಸರ್ವೆ ನಂ,140 ಸಿ/1 , 7 ಎಕರೆ 47 ಸೆಂಟ್ಸ ಜಮೀನುಗು ಮತ್ತು ನಮ್ಮ ವಂಶಕ್ಕು ಸಂಬಂದಿ ವಿಲ್ಲ ಎಂದರೆ ಸರಿಯಲ್ಲ. ಸರ್ವೆ ನಂ,140 ಸಿ/1 ಇದು ನಮ್ಮ ಅಮ್ಮ ಸಕ್ರಮ್ಮ ಇವರ ಹೆಸರಿನಲ್ಲಿತ್ತು ಅವರಿಂದ ನಮ್ಮ ತಂದೆಗೆ ಬಂದು, ಸರ್ವೆ ನಂ,140 ಸಿ/1, 7 ಎಕರೆ 47 ಸೆಂಟ್ಸ ಜಮೀನು ನಮ್ಮ ಅಜ್ಜಿಯ ಹೆಸರಿನಲ್ಲಿ ದಾಖಲಿದೆ ಅನ್ನುವ ಬಗ್ಗೆ ಯಾವುದೇ ದಾಖಲೆ ಇಲ್ಲ ಎಂದರೆ ಸರಿಯಲ್ಲ. ಸದರಿ ಜಮೀನುಗು ನಮ್ಮ ಕುಟುಂಬಕ್ಕೂ ಯಾವುದೆ ಸಂಬಂಧ ಇಲ್ಲದಿದ್ದರು ಸಹ ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಮ್ಮ ತಂದೆ ಬೈಲಪ್ಪ ಮತ್ತು ನಮ್ಮ ಅಜ್ಜ ಕೋರಪ್ಪ ಇವರು ದಿ: 17-07-1967 ರಲ್ಲಿ ಸರ್ವೆ ನಂ,140 ಸಿ ಪೈಕಿ 4 ಎಕರೆ 20 ಸೆಂಟ್ಸ ಜಮೀನನ್ನು

ಮುನ್ ಮಲ್ಲ ಎಂಬುವವರಿಗೆ ಮಾರಾಟ ಮಾಡಿದ್ದಾರೆ ಎಂದರೆ ಸರಿಯಲ್ಲ. ಸರ್ವೆ ನಂ,140 ಸಿ ಪೈಕಿ 5 ಎಕರೆ 46 ಸೆಂಟ್ಸ ಜಮೀನನ್ನು ದಿ: 22-09-1952 ರಂದು ರೂ. 1000/- ಗಳಿಗೆ ನಮ್ಮ ತಂದೆ ಬೈಲಪ್ಪ ಮತ್ತು ಗಂಗವ್ವ ಸೇರಿ ಪೊಕಾಸಿ ಬೀಮನಗೌಡ ಪೋಲಿಸ್ ಗೌಡ ಇವರಿಗೆ ಮಾರಾಟ ಮಾಡಿದ್ದಾರೆ ಎಂದರೆ ಸರಿಯಲ್ಲ. ಈಗಾಗಲೇ ನಮ್ಮ ತಂದೆ ಮತ್ತು ನಮ್ಮ ಅಜ್ಜ ಅವರಿಗೆ ಸೇರಿದ ಜಮೀನನ್ನು ಮಾರಾಟ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಸದರಿ ಮಾರಾಟಗಳು ನೊಂದಾಯಿತ ಕ್ರಯಪತ್ರಗಳ ಮೂಲಕ ಆಗಿದ್ದು ಆ ಬಗ್ಗೆ ಇಸಿಯಲ್ಲಿ ನಮೂದಿದೆ ಎಂದರೆ ಸರಿಯಲ್ಲ. ಸರ್ವೆ ನಂ,140 ಸಿ/1, 7 ಎಕರೆ 47 ಸೆಂಟ್ಸ ಜಮೀನು ನಮ್ಮ ಕುಟುಂಬಕ್ಕೆ ಸಂಬಂಧಿಸಿದ್ದು ಇರುವುದಿಲ್ಲ ಆದ್ದರಿಂದ ನಮ್ಮ ಅಜ್ಜಿಯ ಹೆಸರು ಡೈಗ್ಲಾಟನಲ್ಲಿ ನಮೂದು ಇದೆ ಎಂದರೆ ಸರಿಯಲ್ಲ. ಸದರಿ 7 ಎಕರೆ 47 ಸೆಂಟ್ಸ ಜಮೀನಿನಲ್ಲಿ ಪೊಲಿಸ್ ಗೌಡ ಭೀನಮನ ಗೌಡ ಪಾಟೀಲ ಇವರಿಂದ ವಾದಿಯ ದೊಡ್ಡಪ್ಪ ರಾಮಣ್ಣ ಇವರು 4 ಎಕರೆ ದಿ: 23-02-1955 ರಲ್ಲಿ ಜಮೀನನ್ನು ಖರೀದಿಗೆ ಪಡೆದಿದ್ದಾರೆ ಎಂದರೆ ಸರಿಯಲ್ಲ. ಈ ಹಂತದಲ್ಲಿ ಪಾಟೀಸವಾಲಿಗೆ ಸಮಯಕೋರಿದ್ದು ಸಮಯಾವಕಾಶವನ್ನು ನೀಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕೀಕೃತ ಮಾಡಲಾಯಿತು.)

ಓ. ಹೇ. ಕೇ. ಸರಿ ಇದೆ,

ಸಿವಿಲ್ ಜಡ್ಜ ಮತ್ತು ಜೆ ಎಂ ಎಫ್ ಸಿ.,
ಹಗರಿಬೊಮ್ಮನಹಳ್ಳಿ